A.—Sri A. G. RAMACHANDRA RAO (Minister for Law and Education).—

(*a*) No.

(*b*) Does not arise in view of reply to item (*a*) above.

ಶ್ರೀ ಎಸ್. ಎಂ. ಲಿಂಗಪ್ಪ.—ಈ ಪಾಠಶಾಲೆಯಲ್ಲಿ ವ್ಯಾಸಂಗಮಾಡುತಕ್ಕ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಎಸ್. ಎಂ. ಲಿಂಗಪ್ಪ.—ಆ ಶಾಲೆಯಲ್ಲಿ ವ್ಯಾಸಂಗಮಾಡುತಕ್ಕ ವಿದ್ಯಾರ್ಥಿಗಳ ಸಂಖ್ಯೆ ವರ್ಷ ವರ್ಷವೂ ಹೆಚ್ಚಾಗುತ್ತಿದೆ, ಆದುದರಿಂದ ಆ ಕಟ್ಟಡವನ್ನು ಬಡಾವಣೆ ಮಾಡಬೇಕೆಂದು ಅಲ್ಲಿನ ಜಿಲ್ಲಾ ವಿದ್ಯಾಧಿಕಾರಿಗಳಿಂದ ಸರ್ಕಾರಕ್ಕೆ ಮನವಿ ಬಂದಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರಿಂದ ಸರ್ಕಾರಕ್ಕೆ ಬಂದಿಲ್ಲ. ಬೇರೆ ಕಡೆಗಳಿಂದ ಬಂದಿದೆ.

Sri S. M. LINGAPPA.—What is the action taken by the Government?

Sri A. G. RAMACHANDRA RAO.—We are trying our best to increase the accommodation.

Bellara Gold Fields.

Q.—256. Sri G. A. THIMMAPPA GOWDA (Arkalgud).—

Will the Govern ment be pleased to state :—

(*a*) the total quantity of gold produced in Bellara Gold Fields annually;

(*b*) the total income and expenditure involved in the production of the same annually?

A.—Sri A. G. RAMACHANDRA RAO (Minister for Law and Education).—

(*a*)

Period	*Quantity of gold produced.* (In tolas). Rs. a. p.
1944-45	24 3 4
1945-46	958 9 2
1946-47	286 6 1
1947-48	120 2 4
1948-49	617 1 1
1949-50	855 14 2
1950-51	1,034 11 1
1951-52	401 10 3
1952-53	1,032 1 0

(*b*)

Period.	*Income.* Rs. a. p.	*Expenditure.* Rs. a. p.
1944-45	...	50,764 0 0
1945-46	71,166 13 9	1,21,772 15 5
1946-47	29,762 10 0	1,09,521 10 2
1947-48	8,498 14 0	1,20,811 1 11
1948-49	54,644 14 0	1,53,162 4 7
1949-50	95,507 10 0	1,16,849 5 10
1950-51	91,897 10 6	1,69,462 14 8
1951-52	49,468 7 6	1,83,520 11 3
1952-53	66,460 8 6	3,00,029 3 3

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಗಣಿಯನ್ನು ಸರ್ಕಾರದವರೇ ನಡೆಸುತ್ತಿದ್ದಾರೋ ಅಥವಾ 'ಲೀಸ್' ಕೊಟ್ಟಿದ್ದಾರೊ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದವರೇ ನಡೆಸುತ್ತಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಒಟ್ಟು ಈ ಗಣಿಗೆ ಹಾಕಿರತಕ್ಕ ಬಂಡವಾಳವೆಷ್ಟು?

ಶ್ರೀ ಎ. ಜಿ. ರಾಮಚಂದ್ರರಾವ್.—21,20,000 ರೂಪಾಯಿ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅಲ್ಲಿನ ಖನಿಜ ನಂಪತ್ತನ್ನು ಭೂಗರ್ಭ ಇಲಾಖೆಯವರು ಸರ್ವೆ ಮಾಡಿದ್ದಾರೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿ ಜೀಯಾಲಜಿಸ್ಟುಗಳೇ ಕೆಲಸ ಮಾಡುತ್ತಿರುವುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಆ ಪ್ರದೇಶವನ್ನು ಸರ್ವೆಮಾಡಿ, ಅದರಲ್ಲಿ ಏನಿದೆ ಎಂಬುದರ ಬಗ್ಗೆ ವರದಿ ಕೊಟ್ಟಿದ್ದಾರೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರು ಸಂಶೋಧನೆ ಮಾಡಿ ಅದನ್ನು ತೆಗೆದುಕೊಳ್ಳುವುದು ಉಪಯುಕ್ತವೆಂದು ಹೇಳಿದ ಮೇಲೆಯೇ ಕೆಲಸವನ್ನು ತೆಗೆದು ಕೊಂಡಿರುವುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ 1952-53 ರಲ್ಲಿ ಮೂರು ಲಕ್ಷ ಚಿಲ್ಲರೆ ಖರ್ಚಾಗಿದೆ, ಆದಾಯ 66 ಸಾವಿರ ಬಂದಿದೆ. ಇದು ನಿವ್ವಳ, ಅಂದರೆ ನೆಟ್ ಆದಾಯವೋ ಅಥವಾ ಗ್ರಾಸ್ ಆದಾಯವೋ?

Sri A. G. RAMACHANDRA RAO.—Gross income.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗಾದರೆ ಮುಂದಾದರೂ ಈ ಗಣಿ ಲಾಭದಾಯಕವಾಗಿ ನಡೆಯತ್ತದೆಯೆಂಬ ಚಿಹ್ನೆಗಳಿವೆಯೆ?

ಶ್ರೀ ಎ. ರಾಮಚಂದ್ರರಾವ್.—ಇಲಾಖೆಯವರ ಅಭಿಪ್ರಾಯ ಲಾಭದಾಯಕವಾಗಿ ನಡೆಯುತ್ತದೆಂದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಯಾರಾದರೂ ಹೊರ ದೇಶದವರು ಈ ಗಣಿಯನ್ನು ನಾವು ಲಾಭದಾಯಕವಾಗಿ ನಡೆಸುತ್ತೇವೆ, ನಮಗೆ 'ಲೀಸ್ ಮೇಲೆ ಕೊಡಿ' ಎಂದು ಕೇಳಿದ್ದಾರೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಯಾರೂ ಕೇಳಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಜಾರ್ಟೀಲರ್ ಕಂಪೆನಿಯವರು ಕೇಳಿದ್ದಾರೆಯೆ?

Sri A. G. RAMACHANDRA RAO.—That does not arise.

Alleged offences of fire by some persons of Mattedoddi Village, Ramanagaram Taluk.

Q.—284. Sri N. C. NAGAIAH REDDY (Goribidnur).—

Will the Government be pleased to state :—

(*a*) whether some persons of Mattedodi Village, Ramanagaram Taluk, had been committed to the Sessions for trial for the alleged offence of fire misehief ;

(*b*) what is the date on which the judgment was pronounced in this case ;

(*c*) who was the judge that delivered the judgment ;

(*d*) whether a notice was issued to Sri S. Govinda Sharma, Assistant Sessions Judge, Bangalore, to show cause why he should not be retired in view of the discrepancy in his age ;

(*e*) the date on which the said notice was issued by the Government ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) 29th May 1953.

(*c*) Sri S. Govinda Sharma, Additional Assistant Sessions Judge, Bangalore

(*d*) No notice has been issued by Government to Sri S. Govinda Sharma.

(*e*) Does not arise in view of the reply to part (*d*).

ಶ್ರೀ ಎಚ್. ಸಿ. ನಾಗಯ್ಯ ರೆಡ್ಡಿ.—ಇದೇ ಪ್ರಶ್ನೆಯನ್ನು ಇಲ್ಲಿ ಹಿಂದೆ ಕೇಳಿದಾಗ ಸಾಂಪ್ರದಾಯಿಕ ರೀತಿಯಲ್ಲಿ ನೋಟಿಸ್ ಕೊಟ್ಟಿತ್ತು ಎಂದು ಉತ್ತರಕೊಡಲಾಗಿತ್ತು, ಈ ಹೊತ್ತು 'No notice has been given' ಎಂದು ಹೇಳಿದ್ದೀರಿ, ಇದರಲ್ಲಿ ಯಾವುದು ನಿಜ!

ಶ್ರೀ ಎ. ಜಿ. ರಾಮಚಂದ್ರರಾವ್.—ನೇರವಾಗಿ ಶ್ರೀ ಶರ್ಮ ಎಂಬುವರಿಗೆ ಸರ್ಕಾರದವರು ನೋಟೀಸ್ ಕೊಟ್ಟಿದ್ದಾರೆಯೆ ಎಂದು ಕೇಳಿರುವುದಕ್ಕೆ 'ಇಲ್ಲ' ಎಂದು ಉತ್ತರ ಹೇಳಿದೆ. ಆ ಹೊತ್ತಿನ ಉತ್ತರಕ್ಕೂ ಈ ಹೊತ್ತಿನ ಉತ್ತರಕ್ಕೂ contradiction ಇಲ್ಲ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಸಾಂಪ್ರದಾಯಿಕವಾಗಿ ಕಳುಹಿಸಿದೆ ಎಂದರೆ usual course ನಲ್ಲಿ ಕಳುಹಿಸಿದೆ ಎಂದು ಅರ್ಥ; contradication ಇಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ, usual course ಎಂದರೆ, ಜುಡಿಷಿಯಲ್ ಇಲಾಖೆಯೊಡನೆ ಕಾಗದ ಪತ್ರ ನಡೆಸುವಾಗ ಹೈಕೋರ್ಟಿನ ಮೂಲಕ ನಡೆಸುವುದು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಹೈಕೋರ್ಟಿನ ಮೂಲಕವೇ ಕಳುಹಿಸಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್ ಕೊಟ್ಟಿಲ್ಲ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಇನ್ನೇನು ಚೀಟಿಯನ್ನು ಕಳುಹಿಸಿದ್ದಿರಾ? ಹೈಕೋರ್ಟಿಗೆ ಕಾಗದ ಕಳುಹಿಸಿಲ್ಲವೆ ? 29ನೆಯ ತಾರೀಖು 'Top priority' ಹಾಕಿ ಹೈಕೋರ್ಟಿನ ಮೂಲಕ ನೋಟೀಸ್ ಕಳುಹಿಸಿದ್ದೀವೆ ಎಂದು ಉತ್ತರ ಹೇಳಲಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೈಕೋರ್ಟ್ ನವರು ಇದನ್ನು ವಿಚಾರಣೆ ಮಾಡಿ ಬರೆಯಬೇಕೆಂದು ಅವರಿಗೆ ಬರೆದಿದೆ.

Holding November examinations in the Engineering College.

Q.—309 Sri V. R. NAIDU (Melleswaram).—

Will the Government be pleased to state :—

(*a*) whether they will arrange to hold examinations in November each year in the Engineering College as in the case of Medical College and the Medical School ;

(*b*) whether any proposal in that behalf has been received from the University ;

(*c*) whether they will take steps to hold the examinations during November 1953 ?

A.—Sri A. G. RAMACHANDRA RAO (Minister for Law and Education).—

(*a*) No.

(*b*) No.

(*c*) No.

ಶ್ರೀ ವಿ. ಆರ್. ನಾಯ್ಡು.—ಮೆಡಿಕಲ್ ಕಾಲೇಜು ಮತ್ತು ಮೆಡಿಕಲ್ ಸ್ಕೂಲುಗಳಲ್ಲಿ ನಡೆಸುವಂತೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ನವೆಂಬರ್ ಪರೀಕ್ಷೆ ನಡೆಸುವುದಿಲ್ಲವೆಂದು ಹೇಳಲಾಗಿದೆ, ಏಕೆ ಆ ರೀತಿಮಾಡಿಲ್ಲ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧ್ಯವಾಗದೇಯಿರುವುದರಿಂದ ಮಾಡಿಲ್ಲ.

ಶ್ರೀ ವಿ. ಆರ್. ನಾಯ್ಡು.—ದಾವಣಗೆರೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಈ ಪದ್ಧತಿಯನ್ನನುಸರಿಸುತ್ತಾರಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿ ಜೂಲೈ ತಿಂಗಳಲ್ಲಿ ಅಡ್ಮಿಷನ್ಸ್ ಇಲ್ಲ. ಆ ಕಾಲೇಜು ಪ್ರಾರಂಭವಾದದ್ದೇ ಸೆಪ್ಟೆಂಬರಿನಲ್ಲಿದ ಅದರಿಂದ ಹಾಗೆ ಮಾಡುತ್ತಾರೆ.

ಶ್ರೀ ವಿ. ಆರ್. ನಾಯ್ಡು.—ಹಾಗೆ ಮಾಡಿದರೆ ಒಳ್ಳೆಯದು, ಆ ರೀತಿ ಮಾಡಬೇಕೆಂದು ಹೊಸವಿ ಬಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ಮಾಡಿದರೆ ಒಳ್ಳೆಯದೆಂದಲ್ಲ, ಅವಶ್ಯಕವೆಂದು ಸೂಚಿಸಿದ್ದಾರೆ.